ಸಾಂವಿಧಾನಿಕ ಸಿಂಧುತ್ವ ಎತ್ತಿಹಿಡಿದ 'ಸುಪ್ರೀಂ' : ಮೊಬೈಲ್, ಬ್ಯಾಂಕ್ ಖಾತೆಗೆ ಜೋಡಣೆ ಬೇಡ

# ಆಧಾರ್: ಸೌಲಭ್ಯಕ್ಕಷ್ಟೇ ಸೀಮಿತ


ಪ್ರಜಾವಾಣಿ ವಾರ್ತೆ


ನವದೆಹಲಿ: ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಆಧಾರ್ ಯೋಜನೆಯನ್ನು 4:1 ಬಹುಮತದಲ್ಲಿ ಎತ್ತಿ ಹಿಡಿದಿದೆ. ಆದರೆ, ಆಧಾರ್ ಯೋಜನೆಯ ಹಲವು ಅಂಶಗಳನ್ನು ರದ್ದು ಮಾಡಿದೆ. ಮೊಬೈಲ್ ಫೋನ್, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಮಾಡಬೇಕಿಲ್ಲ ಎಂದು ಹೇಳಿದೆ. ಮಕ್ಕಳನ್ನು ಶಾಲೆಗೆ ಸೇರಿಸುವಾಗ ಆಧಾರ್ ಸಂಖ್ಯೆಯನ್ನು ನೀಡಬೇಕಿಲ್ಲ ಎಂದಿದೆ.

ಕೋಟ್ಯಂತರ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಅಭಿವೃದ್ಧಿ ಯೋಜನೆಗಳ ಫಲವನ್ನು ತಲುಪಿಸುವ ದೊಡ್ಡ ಉದ್ದೇಶ ಈ ಯೋಜನೆಗೆ ಇದೆ. ಹಾಗಾಗಿ ಖಾಸಗಿತನ ಮತ್ತು ವೈಯಕ್ತಿಕ ಘನತೆಯ ನಡುವಣ ಸಮತೋಲನ ಕಾಯ್ದುಕೊಳ್ಳಬೇಕು. ಆಧಾರ್ ಯೋಜನೆ ಮೂಲಕ ಪ್ರತಿ ವ್ಯಕ್ತಿಗೆ ವಿಶೇಷ ಗುರುತನ್ನು ನೀಡಲಾಗುತ್ತಿದೆ. ಬಯೊಮೆಟ್ರಿಕ್ ಮಾಹಿತಿ ಸಂಗ್ರಹದ ಮೂಲಕ ಜನರ ಖಾಸಗಿತನದ ಹಕ್ಕಿನಲ್ಲಿ ಆಗುವ ಮಧ್ಯಪ್ರವೇಶ ಕನಿಷ್ಠವಾದುದು. ಸಾಮಾಜಿಕ ಅಭಿವೃದ್ಧಿಯನ್ನೇ ಮುಖ್ಯವಾಗಿರಿಸಿಕೊಂಡ ದೇಶದ ಉತ್ತಮ ಆಡಳಿತಕ್ಕಾಗಿ ಆಧಾರ್ ಮಹತ್ವದ ಯೋಜನೆಯಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎಸ್. ಪುಟ್ಟಸ್ವಾಮಿ ಮತ್ತು ಇತರ 30ಕ್ಕೂ ಹೆಚ್ಚು ಮಂದಿ ಆಧಾರ್ ಯೋಜನೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು. ಪೀಠವು 1,448 ಪುಟಗಳಷ್ಟು ಸುದೀರ್ಘ ತೀರ್ಪು ನೀಡಿದೆ.

ಈ ಯೋಜನೆಯು ವೈಯಕ್ತಿಕಮಟ್ಟದಲ್ಲಿ ಮಾತ್ರವಲ್ಲದೆ, ಸಾಮುದಾಯಿಕ ಮಟ್ಟದಲ್ಲಿಯೂ ಜನರ ಘನತೆಯನ್ನು ಎತ್ತಿ ಹಿಡಿಯುತ್ತದೆ. ಹಾಗಾಗಿ ಈ ಮೂಲಕ ಹೆಚ್ಚು ವಿಸ್ತೃತವಾದ ಸಾರ್ವಜನಿಕ ಹಿತಾಸಕ್ತಿ ಸಾಧ್ಯವಾಗುತ್ತದೆ ಎಂದು ಪೀಠ ಹೇಳಿದೆ.


ಸಂಪಾದಕೀಯ ಪುಟ ನೋಡಿ



## ಇವಕ್ಕೆಲ್ಲಾ ಕೇಳುವಂತಿಲ್ಲ

1 

ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಮಾಡುವುದು ಕಡ್ಡಾಯವಲ್ಲ

2 


ಶಾಲಾ ಪ್ರವೇಶಕ್ಕೆ ಆಧಾರ್ ಕಡ್ಡಾಯ ಅಲ್ಲ

3 


ಸಿಬಿಎಸ್‌ಇ, ಎನ್‌ಇಇಟಿ ಮತ್ತು ಯುಜಿಸಿಗಳು ನಡೆಸುವ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳು ತಮ್ಮ ಆಧಾರ್ ಸಂಖ್ಯೆ ನಮೂದಿಸಬೇಕಿಲ್ಲ

4 ಆಧಾರ್ ಇಲ್ಲ ಎಂಬ ಕಾರಣಕ್ಕೆ ಯಾವ ಮಗುವಿಗೂ ಯಾವುದೇ ಕಲ್ಯಾಣ ಕಾರ್ಯಕ್ರಮಗಳ ಪ್ರಯೋಜನಗಳನ್ನು ನಿರಾಕರಿಸುವಂತಿಲ್ಲ


## ಇವಕ್ಕೆಲ್ಲಾ ಬೇಕು...

1 

ಪ್ಯಾನ್ ನಂಬರ್‌ಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲೇಬೇಕು


2 

ಸಮಾಜ ಕಲ್ಯಾಣ ಕಾರ್ಯಕ್ರಮಗಳು, ಸರ್ಕಾರದ ಸಹಾಯಧನಗಳನ್ನು ಪಡೆದು ಕೊಳ್ಳಲು ಆಧಾರ್ ಬೇಕು

3 


ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಗೆ ಆಧಾರ್ ಬೇಕು

## 5 ಸೆಕ್ಷನ್ 57 ವಜಾ



ಸರ್ಕಾರ, ಸರ್ಕಾರಿ ಸಂಸ್ಥೆಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳು ಯಾವುದೇ ವ್ಯಕ್ತಿಯ ಆಧಾರ್ ವಿವರಗಳನ್ನು ಪಡೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದ 'ಆಧಾರ್ ಕಾಯ್ದೆ'ಯ ಸೆಕ್ಷನ್ 57ನ್ನು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ ವಜಾ ಮಾಡಿದೆ.

'ಯಾವುದೇ ಉದ್ದೇಶದಿಂದ ಸರ್ಕಾರವಾಗಲೀ ಅಥವಾ ಕಾರ್ಪೊರೇಟ್ ಸಂಸ್ಥೆಯಾಗಲೀ ಅಥವಾ ವ್ಯಕ್ತಿಯಾಗಲೀ ವ್ಯಕ್ತಿಯೊಬ್ಬರ ಗುರುತನ್ನು ದೃಢಪಡಿಸಿಕೊಳ್ಳಲು ಆಧಾರ್ ಅನ್ನು ಕೇಳುವುದಕ್ಕೆ ಯಾವುದೇ ತಡೆ ಇಲ್ಲ' ಎಂದು ಆಧಾರ್ ಕಾಯ್ದೆಯ ಸೆಕ್ಷನ್ 57 ಹೇಳುತ್ತದೆ.

ಇದರ ಪ್ರಕಾರ ದೂರಸಂಪರ್ಕ ಸಂಸ್ಥೆಗಳು ಮತ್ತು ಇ-ಕಾಮರ್ಸ್ ಕಂಪನಿಗಳು ಗ್ರಾಹಕರ ಗುರುತು ದೃಢೀಕರಣಕ್ಕಾಗಿ ಆಧಾರ್ ಅನ್ನು ಕೇಳಬಹುದಿತ್ತು. ಆದರೆ ಈಗ ಈ ಸೆಕ್ಷನ್ ರದ್ದಾಗಿರುವುದರಿಂದ ಇ-ಕಾಮರ್ಸ್ ಜಾಲತಾಣಗಳಲ್ಲಿ ಖರೀದಿ ವೇಳೆ ಮತ್ತು ಮೊಬೈಲ್ ಸಿಮ್ ಖರೀದಿ ವೇಳೆ ಗ್ರಾಹಕರು ಆಧಾರ್ ನೀಡಬೇಕಿಲ್ಲ. ಆಧಾರ್ ವಿವರ ನೀಡಿ ಎಂದು ಕಂಪನಿಗಳು ಗ್ರಾಹಕರನ್ನು ಒತ್ತಾಯಿಸುವಂತಿಲ್ಲ.

ಪ್ರಜಾವಾಣಿ ಗ್ರಾಫಿಕ್ಸ್

## ಮೂರು ತೀರ್ಪುಗಳು

ಈ ವಿಚಾರದಲ್ಲಿ ಐವರು ನ್ಯಾಯಮೂರ್ತಿಗಳು ಮೂರು ಪ್ರತ್ಯೇಕ ತೀರ್ಪುಗಳನ್ನು ನೀಡಿದ್ದಾರೆ. ನ್ಯಾಯಮೂರ್ತಿ ಎ.ಕೆ. ಸಿಕ್ರಿ ಅವರು ಮೊದಲಿಗೆ ತಮ್ಮ ತೀರ್ಪು ಓದಿದರು. ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಮತ್ತು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ಪರವಾಗಿಯೂ ಸಿಕ್ರಿ ಅವರೇ ತೀರ್ಪು ಬರೆದಿದ್ದಾರೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಅಶೋಕ್ ಭೂಷಣ್ ಅವರು ಪ್ರತ್ಯೇಕವಾಗಿ ತಮ್ಮ ತೀರ್ಪುಗಳನ್ನು ಪ್ರಕಟಿಸಿದರು. ಅಶೋಕ್ ಭೂಷಣ್ ಅವರು ಇತರ ಮೂವರು ನ್ಯಾಯಮೂರ್ತಿಗಳ ಅಭಿಪ್ರಾಯಗಳನ್ನು ಒಪ್ಪುವುದಾಗಿ ತಿಳಿಸಿದರು. ಆದರೆ, ಆಧಾರ್ ವಿಚಾರದಲ್ಲಿ ತಮ್ಮದು ಇತರರಿಗಿಂತ ಭಿನ್ನವಾದ ನಿಲುವು ಎಂದು ಚಂದ್ರಚೂಡ್ ಹೇಳಿದರು.

## ಕೋರ್ಟ್ ಹೇಳಿದ್ದೇನು...

- ದೃಢೀಕರಣಕ್ಕೆ ಬಳಕೆಯಾದ ಆಧಾರ್ ದತ್ತಾಂಶಗಳನ್ನು ಆರು ತಿಂಗಳಿಗಿಂತ ಹೆಚ್ಚು ಕಾಲ ಇರಿಸಿಕೊಳ್ಳುವಂತಿಲ್ಲ. ಈಗ ಐದು ವರ್ಷ ಉಳಿಸಿಕೊಳ್ಳಲು ಅವಕಾಶ ಇದೆ
- ಅಕ್ರಮ ವಲಸಿಗರಿಗೆ ಆಧಾರ್ ಸಂಖ್ಯೆ ನೀಡುವಂತಿಲ್ಲ
- ಜನರ ಖಾಸಗಿತನದ ಹಕ್ಕನ್ನು ಉಲ್ಲಂಘಿಸುವ ಯಾವ ಅಂಶವೂ ಆಧಾರ್ ಕಾಯ್ದೆಯಲ್ಲಿ ಇಲ್ಲ
- ಸುಭದ್ರವಾದ ದತ್ತಾಂಶ ರಕ್ಷಣಾ ವ್ಯವಸ್ಥೆಯನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಜಾರಿಗೆ ತರಬೇಕು
- ಅಗತ್ಯ ರಕ್ಷಣಾ ವ್ಯವಸ್ಥೆ ಇರುವುದರಿಂದ ಒಂದಕ್ಕಿಂತ ಹೆಚ್ಚು ಆಧಾರ್ ಪಡೆದುಕೊಳ್ಳಲು ಅವಕಾಶವೇ ಇಲ್ಲ
- ಆಧಾರ್‌ನಿಂದಾಗಿ ವ್ಯಾಪಕವಾದ ಕಣ್ಗಾವಲು ವ್ಯವಸ್ಥೆ ನಿರ್ಮಾಣ ಸಾಧ್ಯವಿಲ್ಲ
- ಬಯೊಮೆಟ್ರಿಕ್ ಮತ್ತು ಕಣ್ಣುಪಾಪೆಯ ಮೂಲಕ ಗುರುತು ದೃಢೀಕರಣ ಸಾಧ್ಯವಾಗದ ಪ್ರಕರಣಗಳಲ್ಲಿ ಗುರುತು ದೃಢೀಕರಣಕ್ಕೆ ಬೇರೊಂದು ವ್ಯವಸ್ಥೆ ಜಾರಿಗೆ ತರಬೇಕು
- ಈಗಾಗಲೇ ಆಧಾರ್ ನೋಂದಣಿ ಮಾಡಿರುವ ಮಕ್ಕಳಿಗೆ 18 ವರ್ಷ ತುಂಬಿದ ಬಳಿಕ ಆಧಾರ್‌ನಿಂದ ಹೊರಗೆ ಹೋಗುವ ಅವಕಾಶ ಇದೆ

# ಆಧಾರ್: ಸೌಲಭ್ಯಕ್ಕಷ್ಟೇ ಸೀಮಿತ

ಒಂದನೇ ಪುಟದಿಂದ...

ಬಯೊಮೆಟ್ರಿಕ್ ಗುರುತಿನ ನಿಖರತೆ ಇರುವುದು ಶೇ 99.76ರಷ್ಟು ಮಾತ್ರ. ಹಾಗಾಗಿ ಈ ಕಾರಣಕ್ಕೆ ಹಲವು ಮಂದಿಗೆ ಸೌಲಭ್ಯ ನಿರಾಕರಣೆಯಾಗಬಹುದು ಎಂದು ಅರ್ಜಿದಾರರು ಮುಂದಿಟ್ಟ ವಾದವನ್ನು ಪೀಠವು ಒಪ್ಪಲಿಲ್ಲ. ಆಧಾರ್ ಯೋಜನೆಯನ್ನು ಕೈಬಿಟ್ಟರೆ ಶೇ 99.76ರಷ್ಟು ಜನರಿಗೆ ತೊಂದರೆಯಾಗುತ್ತದೆ. ಆಗ ಅದು ಜನರಿಗೆ ಸೌಲಭ್ಯ ನಿರಾಕರಿಸಿದಂತೆ ಅಲ್ಲವೇ ಎಂದು ಪೀಠವು ಪ್ರಶ್ನಿಸಿದೆ.

ಯಾರೋ ಕೆಲವರಿಗೆ ಸೌಲಭ್ಯ ನಿರಾಕರಣೆ ಆಗಬಹುದು ಎಂಬ ಸಾಬೀತಾಗಿಲ್ಲದ ಅಂಶವನ್ನು ಇರಿಸಿಕೊಂಡು ಇಡೀ ಯೋಜನೆಯನ್ನು ಕೈಬಿಡುವುದು ಸಾಧ್ಯವಿಲ್ಲ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೇ ಹೊರತು ಇಡೀ ಯೋಜನೆಯನ್ನು ರದ್ದು ಮಾಡುವುದು ಪರಿಹಾರ ಅಲ್ಲ ಎಂದು ಪೀಠ ಹೇಳಿದೆ.

ಆಧಾರ್ ದತ್ತಾಂಶವನ್ನು ಉದ್ಯಮ ಸಂಸ್ಥೆಗಳ ಜತೆಗೆ ಸರ್ಕಾರ ಹಂಚಿಕೊಳ್ಳುವಂತಿಲ್ಲ. ಹೀಗೆ ಹಂಚಿಕೊಳ್ಳುವುದು ಖಾಸಗಿತನದ ಹಕ್ಕಿನ ಉಲ್ಲಂಘನೆ. ಹಾಗಾಗಿ ಇದು ಸಂವಿಧಾನ ಬಾಹಿರ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿ ಮಾಹಿತಿ ಬಹಿರಂಗಪಡಿಸುವ ಅಗತ್ಯ ಎದುರಾದರೆ ಇಂತಹ ನಿರ್ಧಾರ ಕೈಗೊಳ್ಳುವ ಸಮಿತಿಯಲ್ಲಿ ನ್ಯಾಯಾಂಗದ ಅಧಿಕಾರಿಯೊಬ್ಬರು ಇರುವಂತೆ ನೋಡಿಕೊಳ್ಳಬೇಕು. ಹೈಕೋರ್ಟ್‌ನ ನ್ಯಾಯಮೂರ್ತಿಗೆ ಆದ್ಯತೆ ಕೊಡಬೇಕು ಎಂದು ನಿರ್ದೇಶಿಸಿದೆ.